# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 ENGLISH DAILY Subscription Yearly - Rs. - FRIDAY 24-12-2021



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಸೋಯಾ ಮೀಲ್ ದಾಸ್ತಾನು ಹೊಂದು ಮಿತಿ 2022 ಜೂನ್ ತನಕ ಹೇರಿಕೆ

ಏರುಗತಿಯಲ್ಲಿರುವ ಸೋಯಾ ಮೀಲ್ ದರ ನಿಯಂತ್ರಿಸಲು ಸರಕಾರ ಜೂನ್ 2022 ರ ತನಕ ಉತ್ಪಾದಕರಿಗೆ ಹಾಗೂ ವ್ಯಾಪಾರಿಗಳಿಗೆ ದಾಸ್ತಾನು ಹೊಂದಲು ಮಿತಿ ಹೇರಿದೆಯೆನ್ನಲಾಗಿದೆ. ಆಹಾರ ಗ್ರಾಹಕ ವ್ಯವಹಾರ ಸಾರ್ವಜನಿಕ ವಿತರಣಾ ಡಿಪಾರ್ಟ್‌ಮೆಂಟಿನ ಸರ್ಕ್ಯುಲರ್‌ನನ್ವಯ ವ್ಯಾಪಾರಿಗಳು ಹಾಗೂ ವ್ಯಾಪಾರಿ ಕಂಪೆನಿಗಳು 160 ಟನ್ ದಾಸ್ತಾನು ನಿರ್ದಿಷ್ಠ ದಾಸ್ತಾನು ಸ್ಥಳಗಳಲ್ಲಿ ಹೊಂದಬಹುದಾಗಿದೆ. ಉತ್ಪಾದಕರು, ಮಿಲ್‌ಗಳು ಉತ್ಪಾದನೆಯ 90 ದಿನಗಳತನಕ ಮಾತ್ರ ದಾಸ್ತಾನು ಹೊಂದಿರಬಹುದಾಗಿದೆ. ಅವಶ್ಯಕ ಸಾಮಾಗ್ರಿ ಕಾಯಿದೆ 1955ಕ್ಕೆ ತಿದ್ದುಪಡಿಯ ಮೂಲಕ ದಾಸ್ತಾನು ಮಿತಿ ಹೇರಲಾಗಿದೆಯೆನ್ನಲಾಗಿದೆ.